495 (530) : ಶ್ರೀ ಕುಮಾರ್ ಬಂಗಾರಪ್ಪ ಎಸ್. (ಸೊರಬ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 5 ವರ್ಷಗಳಿಂದ ಸೊರಬ ತಾಲ್ಲೂಕಿಗೆ ಸಣ್ಣ ನೀರಾವರಿ ಇಲಾಖೆಯಲ್ಲಿ ಬ್ರಿಡ್ಜ್ ಮತ್ತು ಬ್ಯಾರೇಜ್‌ಗಳೂ ಸೇರಿದಂತೆ ಮಂಜೂರಾದ ಕಾಮಗಾರಿಗಳೆಷ್ಟು ;

ಆ) ಅವುಗಳಲ್ಲಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿದೆ ಹಾಗೂ ಅಪೂರ್ಣಗೊಂಡಿರುವ ಕಾಮಗಾರಿಗಳ ವಿಳಂಬಕ್ಕೆ ಕಾರಣಗಳೇನು ;

ಇ) ಪ್ರಸಕ್ತ ಸಾಲಿನಲ್ಲಿ ಈ ಇಲಾಖೆಯಲ್ಲಿ ಇಂತಹ ಕಾಮಗಾರಿಗಳ ಮಂಜೂರಾತಿಗಾಗಿ ಸರ್ಕಾರಕ್ಕೆ ಎಷ್ಟು ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದೆ ;

ಈ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ;

ಉ) ಸೊರಬ ತಾಲ್ಲೂಕಿನ ಜಂಗಿನಕೊಪ್ಪದಿಂದ ಕುಬಟೂರು ಕೆರೆಗೆ ನೀರಾವರಿ ಚಾನಲ್ ನಿರ್ಮಾಣ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ ;

ಊ) ಸಲ್ಲಿಸಲಾಗಿದ್ದಲ್ಲಿ, ಅದನ್ನು ಯಾವ ಇಲಾಖೆಯಡಿಯಲ್ಲಿ (ಸಣ್ಣ ನೀರಾವರಿ ಅಥವಾ ಮಧ್ಯಮ ನೀರಾವರಿ) ಕೈಗೊಳ್ಳಲಾಗುವುದು ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) –

ಅ) ಒಟ್ಟು 60 ಕಾಮಗಾರಿಗಳು ಮಂಜೂರಾಗಿದೆ.

ಆ) ಒಟ್ಟು 46 ಕಾಮಗಾರಿಗಳು ಪೂರ್ಣ ಗೊಂಡಿವೆ. ನಬಾರ್ಡ್ ಯೋಜನೆಯಡಿಯಲ್ಲಿ 03 ಕಾಮಗಾರಿಗಳು ಪ್ರಗತಿಯಲ್ಲಿವೆ. ಉಳಿದ 11 ಕಾಮಗಾರಿಗಳನ್ನು ಅನುದಾನದ ಕೊರತೆಯಿಂದಾಗಿ ಪ್ರಾರಂಭಿಸಲು ಸಾಧ್ಯವಾಗಿಲ್ಲ.

ಇ) ಈ) ಉ) ವಿವರವಾದ ಪ್ರಸ್ತಾವನೆಗಳು ಯಾವುದೂ ಬಂದಿಲ್ಲ. ಆದರೆ ಶಾಸಕರ ಕೋರಿಕೆ ಮೇರೆಗೆ ಜಂಗಿನಕೊಪ್ಪದಿಂದ ಕುಬಟೂರು ಕೆರೆಗೆ ನೀರಾವರಿ ಚಾಲನ್ ನಿರ್ಮಾಣ ಮಾಡುವ ಕಾಮಗಾರಿಯೂ ಸೇರಿದಂತೆ ಒಟ್ಟು 18 ಕಾಮಗಾರಿಗಳ ಪಟ್ಟಿಯನ್ನು (ಒಟ್ಟು ಮೊತ್ತ ರೂ.24.00 ಕೋಟಿಗಳು) ಸಲ್ಲಿಸಲಾಗಿದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಊ) ಈ ಹಂತದಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ.

1007 : ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ (ಹುಬ್ಬಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?